ಬೇರೆ. ಮದುವೆ ತೀರಾ ಆಟವಲ್ಲ. ಅದು ಜೀವನವಿಡೀ ಇರಬೇಕಾದ ನಂಟು. ನನಗೇನೋ ಇದು ಸರಿಯಾದ ಸಂಬಂಧ ಎನಿಸುವುದಿಲ್ಲ. ನಾನು ನಿನ್ನಲ್ಲಿ ಬೇಡಿಕೊಳ್ಳುತ್ತೇನೆ, ಇವನನ್ನು ಬಿಟ್ಟು ಯಾರಾದರೂ ಜಪಾನೀ ಯುವಕನನ್ನು ಮದುವೆಯಾಗು. ಅದೇ ಲಕ್ಷಣ."

ಅಳು ಪ್ರಾರಂಭಿಸಿದಳು ರಿಂಕೊ.

"ಅಳಬೇಡ. ನಿನಗೆ ಇದರಿಂದ ತೊಂದರೆ ಆಗುತ್ತದೆ, ನಾನು ಇಲ್ಲವೆನ್ನುವುದಿಲ್ಲ. ನೋಡು, ನಿನಗಾಗುವ ತೊಂದರೆಗೆ ಪರಿಹಾರ ಕೊಡಲು ನಾನು ಸಿದ್ಧ. ಎಷ್ಟು ಹಣ ಬೇಕು ಹೇಳು, ಎಷ್ಟಾದರೂ ಸರಿ. ಅವನಿಗೆ ಮಾತ್ರ ಈ ವಿಚಾರ ಹೇಳಬೇಡ. ರಂಪ ಮಾಡ್ತಾನೆ."

ಅಳುತ್ತಲೇ ಇದ್ದಳು ರಿಂಕೊ.

"ಯೋಚನೆ ಮಾಡು, ಇಲ್ಲಿಂದ ಹೊರಡುವ ಮುಂಚೆ ನನಗೆ ತಿಳಿಸಿದರೆ ಸರಿ" ಎಂದವರೇ ಕೊಠಡಿ ಬಿಟ್ಟು ಹೊರಟರು.

ಸುನಿಲ್ ಸ್ನಾನ ಮುಗಿಸಿ, ಡ್ರೆಸ್ ಮಾಡಿಕೊಂಡು ಅವಳ ರೂಮಿಗೆ ಬಂದು ನೋಡಿದಾಗ ರಿಂಕೊ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಅವನನ್ನು ನೋಡಿದ ತಕ್ಷಣ, "ನನಗೆ ಹೀಗೆ ಅವಮಾನ ಮಾಡಲು ಇಲ್ಲಿಗೆ ಕರೆದುಕೊಂಡು ಬಂದೆಯಾ?" ಎಂದಳು. ನಂತರ ಅಳು ನಿಲ್ಲಿಸಿ ಆದದ್ದನ್ನೆಲ್ಲಾ ಹೇಳಿದಳು. ಕೂಡಲೇ ಸ್ಯೂಟ್ ಕೇಸನ್ನು ಪ್ಯಾಕ್ ಮಾಡುವಂತೆ ಹೇಳಿ ತನ್ನ ರೂಮಿಗೆ ಹೋದ ಸುನಿಲ್.

ಕೇವಲ ಐದು ನಿಮಿಷಗಳಲ್ಲಿ ಸುನಿಲ್ ಮತ್ತು ರಿಂಕೊ ತಂತಮ್ಮ ಸ್ಯೂಟ್ ಕೇಸುಗಳನ್ನು ಹಿಡಿದು ಕೆಳಗೆ ಬಂದರು. ಅಲ್ಲಿಯೇ ಅಪ್ಪಅಮ್ಮ ಕುಳಿತಿದ್ದರು. ಧ್ವನಿ ಎತ್ತರಿಸಿ ನುಡಿದ:

"ದುಡ್ಡು ಕೊಟ್ಟು ರಿಂಕೊನ ದೂರಮಾಡಬಹುದು ಎನಿಸಿತಾ, ಪ್ರಶಾಂತ್ ಅಗರವಾಲ್? ನಿಮ್ಮ ದುಡ್ಡನ್ನ ನೀವೇ ಇಟ್ಟುಕೊಳ್ಳಿ. ಇದೇ ಕಡೇ ಮಾತು. ಇಲ್ಲಿಗೆ ಮುಗಿಯಿತು ನನ್ನ ನಿಮ್ಮ ಸಂಬಂಧ. ಇನ್ನು ಎಂದಿಗೂ ನಿಮ್ಮ ಮುಖವನ್ನು ನೋಡುವುದಿಲ್ಲ. ಇವನ್ನೆಲ್ಲಾ ನೋಡಿಕೊಂಡು ಸುಮ್ಮನಿರುವ ರಾಗಿಣಿ, ಇದು ನಿಮಗೂ ಅನ್ವಯಿಸುತ್ತೆ."

ಮನೆಯಿಂದ ಹೊರಬಂದು ಟ್ಯಾಕ್ಸಿ ಕರೆದು ಇಬ್ಬರೂ ನೇರ ಏರ್‌ಪೋರ್ಟ್‌ಗೆ ಹೋಗಿ, ಅಲ್ಲಿಯೇ ಟಿಕೆಟ್ ಪಡೆದು, ಲಾಸ್ ವೆಗಾಸಿಗೆ ಪ್ರಯಾಣ ಮಾಡಿದರು. ಸುನಿಲನೂ ವ್ಯವಹಾರ ಚತುರ. ಲಾಸ್ ವೆಗಾಸಿನಲ್ಲಿ ಕ್ಷಣದ ಮದುವೆ ಸಾಧ್ಯ. ಅಲ್ಲಿ ಮಿಕ್ಕ ಸ್ಥಳಗಳಲ್ಲಿರುವಂತೆ ಸಲ್ಲದ ತಕರಾರುಗಳಿಲ್ಲ. ತಲಪಿದ ಅರ್ಧಗಂಟೆಯಲ್ಲಿ ಸುನಿಲ್ ಮತ್ತು ರಿಂಕೊ ಗಂಡ ಹೆಂಡತಿ ಆದರು.

ರಾಗಿಣಿಗೆ ಜರುಗಿದ ಪ್ರಕರಣದ ಅರಿವೇ ಇರಲಿಲ್ಲ. ಮಗ ಹೊರಟು ಹೋದನಂತರ ಆದದ್ದೇನು ಎಂಬುದು ಗೊತ್ತಾಯಿತು. ಗಂಡನನ್ನು ವಾಚಾಮಗೋಚರವಾಗಿ ಶಪಿಸಿದರು. ಇಷ್ಟಕ್ಕೆಲ್ಲ ಯಾರು ಕಾರಣ ಎಂದು ಗಂಡ ಹೆಂಡಿರ ನಡುವೆ ಸಾಕಷ್ಟು ಮಾತುಕತೆ ಆಯಿತು. ಮಗಳು ಸವಿತಾಳಿಗೂ ಸುದ್ದಿ ಹೋಯಿತು. "ನೀವಿಬ್ಬರೂ ಯಾವ ಶತಮಾನದಲ್ಲಿದ್ದೀರಿ, ನಾಚಿಕೆ ಆಗುವುದಿಲ್ಲವೇ? ಅವರಿಬ್ಬರೂ ಮದುವೆ ಆಗಿದ್ದರೆ ನಿಮ್ಮ ಗಂಟೇನು ಹೋಗುತ್ತಿತ್ತು?" ಎಂದು ಬಿಟ್ಟಳು.

ಮಗನಿಂದ ದೂರವಾಗಿದ್ದು ರಾಗಿಣಿಗೆ ಏನನ್ನೋ ಕಳೆದುಕೊಂಡಿರುವಂತೆ ಭಾವನೆ, ತಮ್ಮ ಸ್ನೇಹಿತೆಯರಲ್ಲಿ ಹೇಳಿಕೊಂಡರು, ಅತ್ತರು. ಮಗನಿಗೆ ನಾನಾ ತರಹ ಇ – ಮೇಲ್ ಕಳಿಸಿದರು. ಕ್ಷಮೆ ಯಾಚಿಸಿದರು; ತಾವೇ ಜಪಾನಿಗೆ ಬಂದು ಖುದ್ದಾಗಿ ಮಾತನಾಡುವುದಾಗಿ ಸೂಚಿಸಿದರು. ನಿನ್ನನ್ನು ಬಿಟ್ಟು ಇರಲಾರೆ ಎಂದೂ ಹೇಳಿದರು. ಸ್ಕೈಪಿನಲ್ಲಿಯಾದರೂ ಒಮ್ಮೆ